ದಿನಾಂಕ 13-09-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆ - ವಾದಿಯರ ಪರ ಮೇಡಂ. ವಕೀಲರಿಂದಃ**

ದಿ. 12-01-2024 ರಂದು ಮುಂದುವರಿದ ಮುಖ್ಯ ವಿಚಾರಣೆ ಇಲ್ಲ ಎಂದು ಆದೇಶ ಮಾಡಿ ಪಾಟೀ ಸವಾಲಿಗಾಗಿ ಕಾಯ್ದಿರಿಸಲಾಗಿದೆ.

**ಪಾಟೀ ಸವಾಲು :** 1 ನೇ ಪ್ರತಿವಾದಿಯವರ ಪರವಾಗಿ ಶ್ರೀ.ಎಸ್.ಎಸ್.ಎನ್ ರವರಿಂದ

ಕರಡಿ ಪೂಜಾರಿಯವರ ಅಳಿಯ ಗರಡಿ ಚಂದು ಪೂಜಾರಿ ಎಂದರೆ ನಿಮ್ಮ ತಂದೆಯವರು ಎಂದರೆ ಹೌದು . ಗರಡಿ ಚಂದು ಪೂಜಾರಿಯವರಿಗೆ ಎಷ್ಟು ಜನ ಮಕ್ಕಳು ಎಂದರೆ 10 ಜನ ಮಕ್ಕಳು . ಅವರು ಯಾರು ಎಂದರೆ ಬಸವರಾಜು , ಬೇಬಿ , ರತ್ನ , ಜಲಜ, ಗುಲಾಬಿ, ದೇವಾನಂದ, ರಾಜರಾಮ್ , ಮನೋಜ್ ,ರೋಹಿಣಿ , ರಜನಿ ಆಗಿರುತ್ತಾರೆ . ಬಸವರಾಜು ರವರು ಬ್ರಹ್ಮಾವರ ಕ್ಷೇತ್ರದ ಎಂ.ಎಲ್ .ಎ ಆಗಿದ್ದರು ಎಂದರೆ ಹೌದು . ಬಸವರಾಜು ರವರು ಯಾವ ಅವಧಿಯಲ್ಲಿ ಎಂಎಲ್ ಎ ಆಗಿದ್ದರು ಎಂದರೆ 1984 ರ ನಂತರ ಆಗಿದ್ದರು ಆದರೇ ಯಾವ ಸಾಲಿನಲ್ಲಿ ಎಂದು ನಿಕರವಾಗಿ ಹೇಳಲು ಆಗುವುದಿಲ್ಲ . ರಾಜರಾಮ್ ರವರು ನಿಮಗೆ ಏನು ಆಗಬೇಕು ಎಂದರೆ ನನ್ನ ತಮ್ಮ. ರಾಜರಾಮ್ ರವರ ಹೆಂಡತಿಯವರು ಜಿಲ್ಲಾ ಪಂಚಾಯತಿಯ ಸದಸ್ಯರಾಗಿದ್ದರು ಎಂದರೆ ಒಂದು ಅವಧಿಗೆ ಸದಸ್ಯರಾಗಿದ್ದರು. ಗರಡಿ ಚಂದು ಪೂಜಾರಿ ಯವರ ಕುಟುಂಬದ ಸದಸ್ಯರು ಕಾಂಗ್ರೇಸ್ ಪಕ್ಷದ ಕಾರ್ಯಕರ್ತರು ಆಗಿದ್ದರು ಎಂದರೆ ಎಲ್ಲಾ ಕುಟುಂಬದ ಸದಸ್ಯರು ಅಲ್ಲ ಕೆಲವು ಸದಸ್ಯರು ಆಗಿದ್ದರು . ನಿಮ್ಮ ತಂದೆಯವರು ಬಹಳ ವ್ಯವಹಾರ ಜ್ಞಾನವನ್ನು ಹೊಂದಿದವರು ಆಗಿದ್ದರು ಎಂದರೆ ಅವರ ಮಟ್ಟಿಗೆ ಹೊಂದಿದ್ದರು . ನಿಮ್ಮ ತಂದೆಯವರು ಊರಿನಲ್ಲಿ 4 ಜನರಿಗೆ ಬೇಕಾಗಿದ್ದಂತಹ ಮುಖ್ಯ ವ್ಯಕ್ತಿಯಾಗಿದ್ದರು ಎಂದರೆ ಹೌದು . ನಿಮ್ಮ ತಂದೆಯ ಬಹಳ ಶ್ರೀಮಂತ ಆಗಿದ್ದರು ಎಂದರೆ ಅಷ್ಟೇನೂ ಆಗಿರಲಿಲ್ಲ. ಗರಡಿ ಚಂದು ಪೂಜಾರಿ ಯವರು ಅವರ ಜೀವಿತ ಕಾಲದಲ್ಲಿ ಊರಿನಲ್ಲಿ ಯಾವುದಾದರೂ ತಕರಾರುಗಳು ಉಂಟದಾಗ ಅದನ್ನು ಸರಿಪಡಿಸುವಲ್ಲಿ ಮುಂದಾಳತ್ವ ವಹಿಸುತಿದ್ದರು ಎಂದರೆ ಹೌದು. ಗರಡಿ ಚಂದು

ಪೂಜಾರಿ ಯವರ ಎಲ್ಲಾ 10 ಮಕ್ಕಳು ಸಹ ಜೀವಂತ ಇದ್ದಾರೆ ಎಂದರೆ ಹೌದು . ಮೃತ ಚಂದು ಪೂಜಾರ್ತಿರವರ ಅಣ್ಣ ಹಾಗೂ 1ನೇ ಪ್ರತಿವಾದಿಯವರ ಮಾವ ರಾಮಾ ಪೂಜಾರಿಯವರು ಚಂದು ಪೂಜಾರಿಯವರ ಮನೆಗೆ ಬಂದು ಹೋಗುತಿದ್ದರು ಎಂದರೆ ನಾವು ಚಿಕ್ಕವರು ಆಗಿದ್ದರಿಂದ ಅಷ್ಟು ಗೊತ್ತಿಲ್ಲ . ರಾಮಾ ಪೂಜಾರಿಯವರು ಚಂದು ಪೂಜಾರಿಯವರು ಜೀವಂತ ಇದ್ದಾಗ ಮನೆಗೆ ಬರುತಿದ್ದರು ಅವರ ಬಗ್ಗೆ ನಿಮಗೆ ಪರಿಚಯ ಇರುತ್ತದೆ ಎಂದರೆ ಸರಿಯಲ್ಲ. ನಿಮ್ಮ ತಂದೆಯವರು ಯಾವಾಗ ಮೃತರಾಗಿರುತ್ತಾರೆ ಎಂದರೆ 2002 ರಲ್ಲಿ ಮೃತರಾಗಿರುತ್ತಾರೆ.

ನಿಮ್ಮ ತಂದೆಯವರು ಜೀವಂತ ಇರುವಾಗ ಒಂದು ವೀಲುನಾಮೆಯನ್ನು ಬರೆಸಿದ್ದರು ಎಂದರೆ ಹೌದು . ನಿಮ್ಮ ತಂದೆಯವರು ಬರೆಸಿದ್ದ ವೀಲುನಾಮೆಯನ್ನು ಬ್ರಹ್ಮಾವರದ ಉಪನೊಂದಾಣಿಧಿಕಾರಿಯವರ ಕಚೇರಿಯಲ್ಲಿ ದಿ 19-08-2000 ರಂದು ನೊಂದಣಿ ಮಾಡಿಸಲಾಗಿರುತ್ತದೆ ಎಂದರೆ ಹೌದು . ಸದರಿ ವೀಲುನಾಮೆಯಲ್ಲಿ ಕಾಣಿಸಿದ್ದ ಎ ಅನುಸೂಚಿ ಸ್ವತ್ತುಗಳನ್ನು ಬೇಬಿ ಪಿ ಪೂಜಾರಿಯವರಿಗೆ ನೀಡಿದ್ದರು ಎಂದರೆ ಹೌದು . ಸದರಿ ವೀಲುನಾಮೆಯಲ್ಲಿ ಕಾಣಿಸಿದ್ದ ಬಿ ಅನುಸೂಚಿ ಸ್ವತ್ತುಗಳನ್ನು ದೇವಾನಂದರವರಿಗೆ ನೀಡಿದ್ದರು ಎಂದರೆ ಹೌದು . ಸದರಿ ವೀಲುನಾಮೆಯಲ್ಲಿ ಕಾಣಿಸಿದ್ದ ಸಿ ಅನುಸೂಚಿ ಸ್ವತ್ತುಗಳನ್ನು ರಜನಿರವರಿಗೆ ನೀಡಿದ್ದರು ಎಂದರೆ ಹೌದು. ವೀಲುನಾಮೆಯಲ್ಲಿ ಕಾಣಿಸಿರುವಂತಹ ಸ್ವತ್ತುಗಳ ಸ್ವಾಧೀನವನ್ನು ಚಂದು ಪೂಜಾರಿಯವರು ಹೊಂದಿ, ಅವುಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಪಡೆದು ಅವುಗಳ ಆದಾರದ ಮೇಲೆ ವೀಲುನಾಮೆಯನ್ನು ಮಾಡಿಸಿರುತ್ತಾರೆ ಎಂದರೆ ಹೌದು . ವೀಲುನಾಮೆಯಲ್ಲಿ ಸುಮಾರು 1 ಎಕ್ರೆಗೂ ಹೆಚ್ಚಿನ ಆಸ್ತಿಗಳನ್ನು ಸೇರಿಸಿರುವುದಿಲ್ಲ ಎಂದರೆ ಸುಮಾರು ಆಸ್ತಿಗಳನ್ನು ಸೇರಿಸಿರುವುದಿಲ್ಲ. ವೀಲುನಾಮೆಯಲ್ಲಿ ಸೇರಿಸದೇಇರುವ ಆಸ್ತಿಗಳ ಪೈಕಿ ಈ ದಾವೆಯ ಎ ಅನುಸೂಚಿಯಲ್ಲಿ ವಿವರಿಸಿರುವ ಸ್ವತ್ತು ಸಹ ಒಂದು ಎಂದರೆ ಹೌದು. ನಿಮ್ಮ ತಂದೆಯವರು ಮೃತರಾದ ನಂತರ ವೀಲುನಾಮೆಯಲ್ಲಿ ಕಾಣಿಸಿರುವ ಸ್ವತ್ತುಗಳನ್ನು ಹಾಗೂ ಇತರ ಆಸ್ತಿಗಳನ್ನು ನೀವೆ ನೋಡಿಕೊಳ್ಳುತಿದ್ದಿರಿ ಎಂದರೆ ಎಲ್ಲರ ಪರವಾಗಿ ನಾನೇ ನೋಡಿಕೊಳ್ಳುತಿದ್ದೆನು . ವೀಲುನಾಮೆಯಲ್ಲಿ ಕಾಣಿಸಿರುವಂತಹ ಸ್ವತ್ತುಗಳ ಖಾತೆಯು ಯಾವಾಗ ಬದಲಾವಣೆ

ಆಗಿರುತ್ತದೆ ಎಂದರೆ ನಮ್ಮ ತಂದೆಯವರು ಮೃತರಾದ ನಂತರ ಬದಲಾವಣೆ ಆಗಿರುತ್ತದೆ. ವೀಲುನಾಮೆಯಲ್ಲಿ ಕಾಣಿಸಿರುವ ಆಸ್ತಿಗಳ ವರ್ಗಾವಣೆಗೆ ಅರ್ಜಿಯನ್ನು ಸಲ್ಲಿಸಿದಾಗ ನೀವು ಅವುಗಳ ಪಹಣಿ ಪತ್ರಿಕೆಗಳನ್ನು ತೆಗೆದುಕೊಟ್ಟಿರುತೀರಿ ಎಂದರೆ ಆ ಸಮಯದಲ್ಲಿ ಕೊಟ್ಟಿರುವುದಿಲ್ಲ ಆದರೇ ಜಾಗದ ದಾಖಲೆಗಳನ್ನು ಕೊಡುವ ಸಮಯದಲ್ಲಿ ಕೊಟ್ಟಿರುತ್ತೇನೆ . ವೀಲುನಾಮೆಯಲ್ಲಿ ಕಾಣಿಸಿರುವ ಆಸ್ತಿಗಳಿಗೆ ಸಂಬಂಧಿಸಿದಂತೆ ಖಾತಾ ವರ್ಗಾವಣೆಗೆ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ವೀಲುನಾಮೆಯಲ್ಲಿ ಕೆಲವೊಂದು ಅಸ್ತಿಗಳನ್ನು ಸೇರಿಸಿರುವುದಿಲ್ಲ ಎನ್ನುವ ವಿಚಾರ ನಿಮಗೆ ತಿಳಿಯಿತು ಎಂದರೆ ಹೌದು . ಆ ಕೂಡಲೇ ವೀಲುನಾಮೆಯಲ್ಲಿ ಕಾಣಿಸದೇ ಇರುವ ಆಸ್ತಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು ನೀವು ತೆಗೆದು ನೋಡಿರುತ್ತೀರಿ ಎಂದರೆ ಹೌದು . ಹಾಗೇ ದಾಖಲೆಗಳನ್ನು ತೆಗೆದು ನೋಡುವಾಗ ಈ ದಾವೆಯ ಅನುಸೂಚಿ ಎ ನಲ್ಲಿ ಕಾಣಿಸಿರುವ ಸ್ವತ್ತಿನ ಪಹಣಿ ಪತ್ರಿಕೆಯನ್ನು ಸಹ ತೆಗೆದು ನೋಡಿರುತೀರಿ ಎಂದರೆ ಒಟ್ಟಿಗೆ ಪಹಣಿ ಪತ್ರಿಕೆಯನ್ನು ತಂದಿರುತ್ತೇವೆ ಆದರೇ ನೋಡಿರುವುದಿಲ್ಲ . ನಿಮಗೆ ಕನ್ನಡ ಒದಲು ಮತ್ತು ಬರೆಯಲು ಬರುತ್ತದೆ ಎಂದರೆ ಹೌದು . ನೀವು ದಾಖಲೆಗಳನ್ನು ತೆಗೆದುಕೊಂಡಾಗ ಈ ದಾವೆಯ ಪಹಣಿ ಪತ್ರಿಕೆಯನ್ನು ಸಹ ತೆಗೆದುಕೊಂಡು ನೋಡಿರುತೀರಿ ಎಂದರೆ ಕೇಸು ದಾಖಲದಾಗ 2010 ರಲ್ಲಿ ನಾನು ನೋಡಿರುತ್ತೇನೆ . ಚಂದು ಪೂಜಾರ್ತಿ ಮತ್ತು ಕೊರಗ ಪೂಜಾರಿಯವರು 2010 ರಲ್ಲಿ ನಿಮ್ಮ ವಿರುದ್ದ ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರ ಕೋರಿ ದಾವೆಯನ್ನು ಸಲ್ಲಿಸಿದ್ದರು ಎಂದರೆ ಹೌದು . ಈ ದಾವೆಯ ಬಿ ಅನುಸೂಚಿಯಲ್ಲಿ ಕಾಣಿಸಿರುವ ಸ್ವತ್ತಿ ಬೇಸಾಯವನ್ನು ಚಂದು ಪೂಜಾರ್ತಿ ಮತ್ತು ಕೊರಗ ಪೂಜಾರಿಯವರು ಮಾಡುತಿದ್ದು ಅವರ ಸ್ವಾಧೀನಕ್ಕೆ ನೀವು ತೊಂದರೆಯನ್ನು ನೀಡಿದ್ದ ಕಾರಣ ಅವರು ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರ ಕೋರಿ ಕುಂದಾಪುರ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದರು ಎಂದರೆ ಸದರಿ ಜಮೀನಿನ ಸ್ವಾ ಧೀನವು ನಮ್ಮ ಬಳಿ ಇತ್ತು. ಚಂದು ಪೂಜಾರ್ತಿ ಮತ್ತು ಕೊರಗ ಪೂಜಾರಿಯವರು ಸಲ್ಲಿಸಿದ್ದ ದಾವೆಯಲ್ಲಿ ಅವರ ಸ್ವಾಧೀನಕ್ಕೆ ತೊಂದರೆ ನೀಡಬಾರದು ಎಂದು ದಾವೆಯ ಡಿಕ್ರಿ ಆಗಿರುತ್ತದೆ ಎಂದರೆ ಹೌದು. ಕುಂದಾಪುರದ ನ್ಯಾಯಾಲಯದಲ್ಲಿ ಶಾಶ್ವತ ನಿರ್ಬಂಧಕಾಜ್ಞೆಯನ್ನು ಕೋರಿ ಸಲ್ಲಿಸಿದ್ದ ದಾವೆಯಲ್ಲಿ ನೀವು ಹಾಜರಾಗಿ ಸಾಕ್ಷ್ಯ

ನೀಡಿರುತೀರಿ ಎಂದರೆ ಹೌದು . ಕುಂದಾಪುರದ ನ್ಯಾಯಾಲಯದಲ್ಲಿ ಚಂದು ಪೂಜಾರ್ತಿ ಮತ್ತು ಕೊರಗ ಪೂಜಾರಿಯವರು ಸಲ್ಲಿಸಿದ್ದ ದಾಖಲೆಗಳನ್ನು ನೀವು ನೋಡಿರುತೀರಿ ಎಂದರೆ ಹೌದು . ಕುಂದಾಪುರದ ನ್ಯಾಯಾಲಯದಲ್ಲಿ ಚಂದು ಪೂಜಾರ್ತಿ ಮತ್ತು ಕೊರಗ ಪೂಜಾರಿಯವರು ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದರು ಎಂದರೆ ಹೌದು . ಸಾಕ್ಷಿಯವರಿಗೆ ಒಂದು ಪಹಣಿ ಪತ್ರಿಕೆಯ ದೃಡಿಕೃತ ಪ್ರತಿ ತೋರಿಸಿ ಇದು ಸರ್ವೇ ನಂಬರ್ 142/14 ವಿಸ್ತೀರ್ಣ 58 ಸೆಂಟ್ಸ್ ಗೆ ಸಂಬಂಧಿಸಿದ್ದು ಎಂದರೆ ಸಾಕ್ಷಿಯವರು ಹೌದು ಎಂದು ಹೇಳುತ್ತಾರೆ. ಸದರಿ ಪಹಣಿ ಪತ್ರಿಕೆಯನ್ನು ನಿಡಿ1 ಎಂದು ಗುರುತಿಸಲಾಯಿತು. ಅದೇ ಪಹಣಿ ಪತ್ರಿಕೆಯ 11 ನೇ ಕಂಡಿಕೆಯಲ್ಲಿ ಅಣ್ಣಯ್ಯ ಪೂಜಾರಿಯವರ ಅಳಿಯ ಶೇಖರ ಪೂಜಾರಿ ಹಾಗೂ ನಂದಿಯಪ್ಪ ನವರ ಅಳಿಯ ಕೋಡಿ ಬಿಳ್ಳರಾಮ ರವರು ಚಾಲಗೇಣಿಯಲ್ಲಿ ಇದ್ದಾರೆ ಎಂದು ದಾಖಲಾಗಿದೆ ಎಂದರೆ ಸಾಕ್ಷಿಯವರು ಅದರಲ್ಲಿ ಇದೆ ಆದರೇ ಅದು ಸರಿ ಇರುವುದಿಲ್ಲ . ಸದರಿ ಪಹಣಿ ಪತ್ರಿಕೆಯಲ್ಲಿ ಚಾಲಗೇಣಿಯ ಬಗ್ಗೆ ನಮೂದಿಸಿರುವುದು ತಪ್ಪು ಎನ್ನುವ ವಿಚಾರ ನಿಮ್ಮ ಗಮನಕ್ಕೆ ಬಂದಿತು ಎಂದರೆ ಕೇಸು ದಾಖಲಾದ ನಂತರ ಬಂದಿತು . ಚಾಲಗೇಣಿ ಬಗ್ಗೆ ನಮೂದು ಮಾಡಿರುವುದು ತಪ್ಪು ಎಂದು ಆಕ್ಷೇಪ ಸಲ್ಲಿಸಿರುತೀರಾ ಎಂದರೆ ಹೌದು . ಸದರಿ ಆಕ್ಷೇಪದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಇರುವುದಿಲ್ಲ .

**ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸ. ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ. ಮತ್ತು ಸಿ.ಜೆ.ಎಂ
ಉಡುಪಿ.